ಹವ್ಯಾಸಿ ಕಲೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮನಸ್ಸು ಹಗುರವಾಗಿ ಆಹ್ಲಾದದಿಂದಿರುತ್ತದೆ. ಅಂತಹ ಕಲೆಗಳನ್ನು ಹೊಂದಿದ, ಸಾಧನೆ ಮಾಡಿದ ವ್ಯಕ್ತಿಗಳಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನ ಇದೆ. ಜನ ಗೌರವ ಕೊಡುತ್ತಾರೆ.

ಛಾಯಾಚಿತ್ರ ಇದೂ ಒಂದು ಕಲೆ. ನುರಿತ ಛಾಯಾಚಿತ್ರಗ್ರಾಹಕನಿಗೆ ಮಾತ್ರ ಅಚ್ಚರಿ ಮಾಡುವಂತೆ ಚಿತ್ರ ಸೆರೆಹಿಡಿಯಲು ಸಾಧ್ಯ. ಫ್ಯಾಶನ್ ಶೋನಲ್ಲಿ ಅವಧಿ, ಲೈಟಿಂಗ್, ಖರ್ಚು, ಈವೆಂಟ್ ಸಲಕರಣೆಗಳು, ಒಟ್ಟು ತಯಾರಿ, ನೋಡುಗರು, ರೂಪದರ್ಶಿಗಳು, ಡ್ರೆಸ್ಸಿಂಗ್ ರೂಮ್.. ಇವಿಷ್ಟು ಒಂದು ಕಡೆಯಾದರೆ ಇದನ್ನು ಸೆರೆಹಿಡಿಯುವ ಛಾಯಾಚಿತ್ರಗಾರನ ಶ್ರಮ, ಅವನ ಕೌಶಲ್ಯ ಇದಕ್ಕೂ ತುಂಬಾ ಬೆಲೆ ಸ್ಥಾನ



ನಿಶಾಂತ್‌ಕೃಷ್ಣ

ಇದೆ. ಏಕೆಂದರೆ ನಾವು ಇಷ್ಟು ಅದ್ದೂರಿಯಿಂದ ಮಾಡಿದ ಕಾರ್ಯಕ್ರಮವನ್ನು ಅದೇ ರೀತಿಯಲ್ಲಿ ದಾಖಲಿಸಬೇಕಾದರೆ ಅದು ಛಾಯಾಚಿತ್ರಗಾರನ ಕೈಚಳಕದಿಂದ ಸಾಧ್ಯ. ಈ ಕಲೆ ನಿಶಾಂತ್‌ಗೆ ಸಿದ್ಧಿಸಿದೆ.

ಎಂಜಿನಿಯರ್ ವೃತ್ತಿಯಲ್ಲಿರುವ ನಿಶಾಂತ್‌ಗೆ ಫ್ಯಾಷನ್ ಫೋಟೊಗ್ರಫಿಯಲ್ಲಿ ಆಸಕ್ತಿ ಬೆಳೆದದ್ದಾದರೂ ಹೇಗೆ? ನಿಶಾಂತ್ ಕೃಷ್ಣ ಎಳೆಯ ವಯಸ್ಸಿನಲ್ಲಿ ಛಾಯಾಚಿತ್ರಗಳನ್ನು ಕುತೂಹಲದಿಂದ ನೋಡುತ್ತಿದ್ದ. ಫೋಟೊಗ್ರಫಿಯಲ್ಲಿ ಆಸಕ್ತಿ ಬೆಳೆಯಲಾರಂಭಿಸಿತು. ಫ್ಯಾಷನ್ ಷೋದಲ್ಲಿ ಫೋಟೊ ಸೆರೆಹಿಡಿಯುವುದು ಸುಲಭವಲ್ಲ ಎನಿಸಿತು. ನಡಿಗೆಯ ಆ್ಯಕ್ಷನ್‌ನಲ್ಲಿರುವಾಗ ಅದನ್ನು ಕ್ಲಿಕ್ಕಿಸಿ ಮತ್ತೆ ಮತ್ತೆ ನೋಡಿದಾಗ ಎಲ್ಲಿ ಈ ಕಲೆಯನ್ನು ಇಂಪ್ರೂವ್ ಮಾಡಿಕೊಳ್ಳಬಹುದು ಎಂದು ತನಗೆ ತಾನೇ ಲೆಕ್ಕ ಹಾಕತೊಡಗಿದ. ಹಾಗೇ ಎಂಜಿನಿಯರಿಂಗ್ ಕಲಿಯುವಾಗ ಬೆಂಗಳೂರಿನ ಎಮ್.ಎಸ್.ರಾಮಯ್ಯ ಕಾಲೇಜು, ವಿಟಿಯು ಫೆಸ್ಟ್‌ಗಳಲ್ಲಿ ನಡೆದ ಫ್ಯಾಷನ್ ಶೋಗಳಲ್ಲಿ ನಿಶಾಂತ್ ಫೋಟೊಗ್ರಫಿ ಮಾಡಿ ಆಯೋಜಕರಿಂದ ಮೆಚ್ಚುಗೆ ಗಳಿಸಿದ. ಕಾಲೇಜಿನಲ್ಲಿರುವಾಗಲೇ ಅಂತರಶಾಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನೂ ಗಳಿಸಿ ಉತ್ತಮ ಫೋಟೊಗ್ರಾಫರ್ ಎನಿಸಿದ್ದ ಹೆಗ್ಗಳಿಕೆ ನಿಶಾಂತ್ ಬೆನ್ನಿಗಿದೆ.

ಬೆಂಗಳೂರಿನ ಆಭರಣ ಮಳಿಗೆಯೊಂದರಲ್ಲಿಯೂ ನಡೆಸಿದ ಫ್ಯಾಷನ್ ಶೋದಲ್ಲಿ ನಿಶಾಂತ್ ಫೋಟೊಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದ. ಅದೂ ಕೂಡ ಈತ ಒಬ್ಬ ಉತ್ತಮ ‘ಫ್ಯಾಷನ್ ಫೋಟೊಗ್ರಾಫರ್’ ಎಂಬುದನ್ನು ಸಾಬೀತುಪಡಿಸಿತು. ಅಲ್ಲಿಂದ ಶುರುವಾದ ಆಸಕ್ತಿ ಈತನನ್ನು ಫ್ಯಾಷನ್ ಛಾಯಾಚಿತ್ರಗಾರನನ್ನಾಗಿ ರೂಪಿಸಿತು.

ಫ್ಯಾಷನ್ ಛಾಯಾಚಿತ್ರ ಕ್ಲಿಕ್ಕಿಸುತ್ತಿರುವಾಗಲೇ ತಾನೂ ಕ್ಯಾಟ್‌ವಾಕ್ ಮಾಡಿದರೆ ಹೇಗೆ ಎನಿಸಿತು. ಎಂಜಿನಿಯರ್ ಆಗಿ ವೃತ್ತಿ ಆರಂಭಿಸಿದ ಮೇಲೆ ಒಮ್ಮೆ ಫ್ಯಾಷನ್ ಷೋದಲ್ಲಿ ಕ್ಯಾಟ್‌ವಾಕ್ ಕೂಡ ಮಾಡಿದ ನಿಶಾಂತ್. ಜೊತೆಗೆ ಫ್ಯಾಷನ್ ಶೋಗಳಲ್ಲಿ ಫೋಟೊಗ್ರಫಿ ಹೇಗಿರಬೇಕು ಎಂಬ ಬಗ್ಗೆಯೂ ಅಧ್ಯಯನ ನಡೆಸಿದ. ಹಲವಾರು ಫ್ಯಾಷನ್ ಷೋಗಳಿಗೆ ಹೋಗಿ ಫೋಟೊ ತೆಗೆದು ಸಾಮಾಜಿಕ ಜಾಲತಾಣಗಳಿಗೆ ಪೋಸ್ಟ್ ಮಾಡಲಾರಂಭಿಸಿದ. ನೋಡುಗರಿಂದಲೂ ಉತ್ತಮ ಪ್ರತಿಕ್ರಿಯೆ ಬಂತು. ಜನರಿಂದ ಮೆಚ್ಚುಗೆ ಜತೆಗೆ ಫ್ಯಾಷನ್ ಫೋಟೊಗ್ರಫಿ ಮಾಡುವ ಅವಕಾಶವೂ ವಿಸ್ತರಿಸಿತು.

ಬೆಂಗಳೂರಿನಲ್ಲಿ ನಡೆದ ‘ಬೆಂಗಳೂರು 16ನೇ ಎಡಿಶನ್ ಫ್ಯಾಷನ್ ಶೋ, ಫೆಮಿನಾ ಸ್ಟೈಲ್ ಫ್ಯಾಷನ್ ಶೋ (2017), ಯಸ್ ಕಂಪೆನಿ ಡಿಸೈನರ್ ಫೆಸ್ಟಿವಲ್, ಕಿಂಗ್ ಫಿಶರ್ ಅಲ್ಟ್ರಾ ದರ್ಬೈ 2017 ಓಪನಿಂಗ್ ಷೋ, ಬೆಂಗಳೂರು 17ನೇ ಎಡಿಶನ್ ಫ್ಯಾಶನ್ ಷೋ, ಬೆಂಗಳೂರು ಫ್ಯಾಷನ್ ವೀಕ್.. ಮುಂತಾದ ಜನಪ್ರಿಯ ಫ್ಯಾಷನ್ ಶೋಗಳಲ್ಲಿ ಅಧಿಕೃತ ಛಾಯಾಚಿತ್ರಗಾರನಾಗಿ ಮಿಂಚಿದ ನಿಶಾಂತ್, ಅದಾಗಿ ಈ ಹವ್ಯಾಸದಲ್ಲಿ ಖಾಯಂ ಆಗಿ ನೆಲೆಯೂರಿದ.

## ಫ್ಯಾಷನ್ ಶೋ ನಿಭಾವಣೆ ಹೇಗೆ?

ಸಾಮಾನ್ಯವಾಗಿ ಉಡುಪು ವಿನ್ಯಾಸಗಾರರು ಟ್ರೆಂಡಿ ಡ್ರೆಸ್‌ಗಳನ್ನು ಡಿಸೈನ್ ಮಾಡಿ ಅದನ್ನು ಮಾರ್ಕೆಟಿಂಗ್ ಮಾಡಲು ಫ್ಯಾಷನ್ ಶೋ ಏರ್ಪಡಿಸುತ್ತಾರೆ. ಸಂಘಟಕರು ಒಂದು ಫ್ಯಾಷನ್ ಶೋ ನಡೆಸಲು ಜಾಗ ಎಲ್ಲವನ್ನೂ ಸಿದ್ಧಪಡಿಸಿಕೊಳ್ಳುತ್ತಾರೆ. ಇಲ್ಲಿ ಮಾಡೆಲ್‌ಗಳೇ ಮುಖ್ಯ. ಇವರ ಆರೋಗ್ಯ, ಸೌಂದರ್ಯ ಶೋ ಸಮಯದಲ್ಲಿ ಇವರ ಉಡುಪು, ಒಡವೆ, ಅಲಂಕಾರದ ನಿರ್ವಹಣೆ, ವೇದಿಕೆಯಲ್ಲಿ ಬೆಳಕಿನ ವ್ಯವಸ್ಥೆ, ಎಲ್ಲವನ್ನೂ ಗಮನಿಸಬೇಕಾಗುತ್ತದೆ. ಜತೆಗೆ ಇಡೀ ಫ್ಯಾಷನ್ ಷೋವನ್ನು ದಾಖಲೀಕರಿಸಲು ಉತ್ತಮ ಫೋಟೊಗ್ರಫಿ ಹಾಗೂ ವಿಡಿಯೊ ಚಿತ್ರೀಕರಣ ಮಾಡಬೇಕಾಗುತ್ತದೆ.

‘ಛಾಯಾಚಿತ್ರಗಾರ ಸೆರೆಹಿಡಿಯುವ ಪ್ರತಿಯೊಂದು ಚಿತ್ರವೂ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಷೋ ನಡೆಯುವಾಗ ಯಾವಾಗ ಎಲ್ಲಿ ಚಿತ್ರ ಸೆರೆಹಿಡಿಯಬೇಕು. ನಡಿಗೆಯ ಅವಧಿಯಲ್ಲಿ ಪೋಸ್ ಕೊಡುವ ಸಮಯ ಆಲೋಚಿಸಿ ಸೆರೆ ಹಿಡಿಯಬೇಕು. ಇದು ಎಲ್ಲರಿಗೂ ಸಿಗುವಂತಹ ಅವಕಾಶವಲ್ಲ. ನುರಿತ ತಜ್ಞನಿಗೆ ಮಾತ್ರ ಸಾಧ್ಯ. ಎಳೆ ವಯಸ್ಸಿನಲ್ಲಿ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಅರ್ಥ ಮಾಡಿಕೊಂಡು ಇಡೀ ಒಂದು ಷೋವನ್ನು ಬಿಡುವಿಲ್ಲದೇ ತದೇಕಚಿತ್ತನಾಗಿ ಸೆರೆಹಿಡಿಯುವುದು. ಅದನ್ನು ಸಮರ್ಪಕವಾಗಿ ಎಡಿಟಿಂಗ್ ಮಾಡಿ ಪುನಃ ಸಂಘಟಕರಿಗೆ ನೀಡಬೇಕು. ಆಗಲೇ ಇನ್ನೊಂದು ಕಡೆ ಅವಕಾಶ ಸಿಗುವುದು’ ಎಂದು ಹೇಳುತ್ತಾರೆ ನಿಶಾಂತ್.

‘ಯಾವುದಾದರೂ ವೃತ್ತಿಯೊಂದಿಗೆ ಹವ್ಯಾಸ ಇರುವುದರಿಂದ ಸಂತಸವೂ ಆಹ್ಲಾದವೂ ಜೀವನದಲ್ಲಿ ಇರುತ್ತದೆ. ಜೀವನದ ಆಧಾರಕ್ಕೆ ದುಡಿಯಲೇ ಬೇಕು. ನನ್ನ ಇಷ್ಟದ ಹವ್ಯಾಸವಾಗಿ ‘ಫ್ಯಾಷನ್ ಛಾಯಾಗ್ರಹಣ’ ಆಯ್ಕೆ ಮಾಡಿಕೊಂಡಿದ್ದೇನೆ’ ಎನ್ನುವುದು ನಿಶಾಂತ್ ನುಡಿಗಳು.


ನಂ.1 ವಶೀಕರಣ ಮೋಡಿಗಾರರು - ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ - 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾಧ್ಯ. ನಿಗೂಢ ಗುಪ್ತ ಸಮಸ್ಯೆಗಳೇನೇ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ